ರಾಜ್ಯದ ಕೃಷಿ ಮಾರುಕಟ್ಟೆಯಲ್ಲಿ ಮಾರಾಟದ ಹಣ ಪಾವತಿ

146(418) ಶ್ರೀ ಡಿ.ಆರ್. ಪಾಟೀಲ್ (ಗದಗ) ಮಾನ್ಯ ಕೃಷಿ ಮಾರುಕಟ್ಟೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಎಷ್ಟು ನಿಯಂತ್ರಿತ ಮಾರುಕಟ್ಟೆಗಳಲ್ಲಿ ರೈತ ತನ್ನ ಉತ್ಪಾದನೆಯನ್ನು ಮಾರಾಟ ಮಾಡಿದ ದಿನದಂದೇ ಮಾರಾಟದ ಹಣ ಪಡೆಯುತ್ತಾನೆ; ಅಂತಹ ಸೌಲಭ್ಯ ಇರುವ ಮಾರುಕಟ್ಟೆಗಳ ಪಟ್ಟಿ ನೀಡುವುದು;

ಆ) ಈ ವ್ಯವಸ್ಥೆಯನ್ನು ಉಳಿದ ಎಲ್ಲಾ ಮಾರುಕಟ್ಟೆಗಳಿಗೂ ವಿಸ್ತರಿಸಲು ಸರ್ಕಾರಕ್ಕೆ ಇರುರ ತೊಂದರೆಗಳೇನು?

ಇ) ರೈತರಿಗೆ ಆತ ಮಾರಾಟ ಮಾಡಿದ ಉತ್ಪಾದನೆಯ ಹಣವನ್ನು ಸಂದಾಯ ಮಾಡುವುದನ್ನು ಕಾನೂನುಬದ್ಧವಾಗಿ ಹಾಗೂ ಪಾದರ್ಶಕವಾಗಿ ನಡೆಯುವ ದೃಷ್ಟಿಯಿಂದ ಉಭಯ ಸದನಗಳು ಈಗಾಗಲೇ ಪಾಸು ಮಾಡಿದ ಕಾನೂನನ್ನು ಅನುಷ್ಠಾನಗೊಳಿಸುವಲ್ಲಿ ಸರ್ಕಾರ ಕೈಗೊಳ್ಳಲಿರುವ ಕ್ರಮಗಳೇನು;

ಶ್ರೀ ಬಿ.ಎಸ್. ಪಾಟೀಲ್ (ಕೃಷಿ ಮಾರುಕಟ್ಟೆ ಸಚಿವರು):

ಅ) ಹುಟ್ಟುವಳಿಗಳ ಮಾರಾಟಕ್ಕೆ ಸಂಬಂಧಪಟ್ಟ ಹಣವನ್ನು ರೈತರಿಗೆ ಅಂದೇ ಸಂದಾಯ ಮಾಡುವ ಅವಕಾಶ ಕಾನೂನಿನಲ್ಲಿ ಈಗಾಗಲೇ ಇದ್ದು, ಅದೇ ದಿನ ಅವಶ್ಯಕ ಹಣ ಪಾವತಿ ಮಾಡಲು ಸಂಬಂಧಪಟ್ಟವರೆಲ್ಲರಿಗೂ ನಿರ್ದೇಶನಗಳನ್ನು ಸಹ ನೀಡಲಾಗಿದೆ.

ಆ) ಮಾರುಕಟ್ಟೆ ಸಮಿತಿ ಅಧ್ಯಕ್ಷರು, ಕಾರ್ಯದರ್ಶಿ ಹಾಗೂ ಕೆಲವು ಶಾಸಕರ ಜೊತೆಗೆ ಸಾಕಷ್ಟು ಸಂವಾದ ನಡೆದ ನಂತರ, ಈಗಿರುವ ಕಾಯ್ದೆಯಲ್ಲಿನ ಅವಕಾಶಗಳನ್ನು ಕಟ್ಟುನಿಟ್ಟಾಗಿ ಅನುಷ್ಠಾನಗೊಳಿಸುವುದರಿಂದ ರೈತರಿಗೆ ಶೀಘ್ರ ಹಣ ಪಾವತಿ ಮಾಡುವಂತೆ ಮಾಡಲು ಸಾಧ್ಯತೆ ಇದೆಯೆಂದು ಅಭಿಪ್ರಾಯ ವ್ಯಕ್ತವಾಗಿರುತ್ತದೆ. ಈ ಹಿನ್ನಲೆಯಲ್ಲಿ ವರ್ತಕರ ಸಂಘದ ಪದಾಧಿಕಾರಿಗಳು ಸೇರಿದಂತೆ ಸಂಬಂಧಪಟ್ಟವರ ಸಭೆ ಕರೆದು ವಿಧಿವಿಧಾನಗಳ ಕುರಿತು ಅಂತಿಮ ನಿರ್ಧಾರ ಕೈಗೊಳ್ಳಲಾಗುವುದು.

ಸಹಕಾರ ಇಲಾಖೆಯಲ್ಲಿ ಅಧಿಕಾರಿಗಳ ಹಾಗೂ ಸಿಬ್ಬಂದಿ ವೇತನ ಭತ್ಯೆ

147(152) ಶ್ರೀ ಪಿ.ಹೆಚ್. ಪೂಜಾರ್ (ಬಾಗಲಕೋಟೆ) ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಹಕಾರ ಇಲಾಖೆಯಲ್ಲಿ 1999-2000, 2000-2001 ಹಾಗೂ 2001-2002ನೇ ಸಾಲಿಗೆ ಅಧಿಕಾರಿಗಳ ಹಾಗೂ ಸಿಬ್ಬಂದಿ ವೇತನ ಭತ್ಯೆ ಇತ್ಯಾದಿ ಭತ್ಯೆಯನ್ನೊಳಗೊಂಡತೆ ಆಡಳಿತ ನಿರ್ವಹಣೆಗೆ ಹಾಗೂ ಅಭಿವೃದ್ಧಿಗೆ ನಿಗದಿತ ಹಾಗೂ ವೆಚ್ಚವಾದ ಹಣವೆಷ್ಟು;

ಆ) 2002-2003ನೇ ಸಾಲಿನ ಆಯವ್ಯಯದಲ್ಲಿ ಆಡಳಿತ ವೆಚ್ಚಕ್ಕಾಗಿ ಹಾಗೂ ಅಭಿವೃದ್ಧಿ ವೆಚ್ಚಕ್ಕಾಗಿ ನಿಗದಿಮಾಡಿದ ಹಣವೆಷ್ಟು;